ಕರ್ನಾಟಕ ವಿಧಾನ ಸಭೆ

ಮಂಗಳವಾರ 29ನೇ ಸೆಪ್ಟೆಂಬರ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು: ಈಗ ಕಾಗದ ಪತ್ರಗಳ ಮಂಡನೆ ಆಗಲಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ .....

ಅಧ್ಯಕ್ಷರು: ಮೊದಲು ಕಾಗದ ಪತ್ರಗಳ ಮಂಡನೆಯಾಗಲಿ. ನಂತರ ಬರಗಾಲದ ಬಗ್ಗೆ ಚರ್ಚೆ ತೆಗೆದುಕೊಳ್ಳೋಣ.

1. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಬಿ. ಪಾಟೀಲ್ (ಅಪರ ಕಾರ್ಯದರ್ಶಿಯವರು): ಮಾನ್ಯ ಅಧ್ಯಕ್ಷರೆ,

1. ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ ವನ್ನು ಸಭೆಯ ಮುಂದಿಡುತ್ತೇನೆ.

2. ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೇ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004 ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ)ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಸಭೆಯ ಮುಂದಿಡಲಾಯಿತು

2. ನಿಯಮ 69ರ ಮೇರೆಗೆ

ವಿಷಯ: ರಾಜ್ಯದಲ್ಲಿ ಬರ ಮತ್ತು ನೆರೆ ಹಾವಳಿಯಿಂದ ಉಂಟಾದ ತೊಂದರೆಗಳು ಮತ್ತು ಡಾ: ನಂಜುಂಡಪ್ಪ ವರದಿ ಅನುಷ್ಠಾನದ ಬಗ್ಗೆ (ಮುಂದುವರೆದುದು)

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಬರಗಾಲದ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಒಂದು ಗಂಟೆಯವರೆಗೆ ಚರ್ಚೆ ಆಗಿದೆ. ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಈ ರಾಜ್ಯದಲ್ಲಿ ಬರಗಾಲ ಇಲ್ಲ ಎಂದು ಹೇಳಿದ್ದಾರೆ. ರಾತ್ರಿ ಪೂರಾ ವೆಲ್‌ನಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು ಇಲ್ಲಿಯವರೆವಿಗೂ ಹಾಗೆಯೇ